ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ ಬಿ ವಿ ವಕೀಲರಿಂದಃ

ನಾನು ಈ ಹಿಂದೆ ಪಾಟೀ ಸವಾಲಿನ ಹೇಳಿರುವಂತೆ ಜೆರಾಕ್ಸ್ ಪ್ರತಿಗಳನ್ನು ಪಡೆದುಕೊಂಡಿರುತ್ತೇನೆ ಎಂದು ಹೇಳಿದ್ದು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರವುದಿಲ್ಲ ಎಂದರೆ ಸರಿ. ನೋಂದಣಿಗೆ ಬೇಕಾಗುವಂತಹ ಎಲ್ಲಾ ದಾಖಲೆಗಳು 1 ನೇ ಪ್ರತಿವಾದಿ ಮತ್ತು ಅವರ ಗಂಡ ರಮೇಶ್ ರವರ ಬಳಿ ಇದ್ದವು. ಕ್ರಯ ಪತ್ರವನ್ನು ಬರೆದುಕೊಡಲು 6 ತಿಂಗಳ ವಾಯಿದೆ ಪ್ರತಿವಾದಿಗಳು ಪಡೆದುಕೊಂಡಿದ್ದರು. 6 ತಿಂಗಳ ವಾಯಿದೆ ಒಳಗೆ ಪ್ರತಿವಾದಿಗಳಿಗೆ ನಾನು ಯಾವುದೇ ನೋಟಿಸು ನೀಡಿರುವುದಿಲ್ಲ. ನೋಟಿಸ್ ಅನ್ನು ಪ್ರತಿವಾದಿಯರಿಗೆ ಕರಾರು ಪತ್ರವಾದ 3 ವರ್ಷಗಳ ಒಳಗೆ ನೀಡಿರುತ್ತೇನೆ. ನೋಟಿಸ್ ನೀಡಿದ ದಿನಾಂಕ ಈಗ ನೆನಪಿರುವುದಿಲ್ಲ. ರಮೇಶ್ ರವರು ಬದುಕಿದ್ದ ಸಮಯದಲ್ಲಿ ಅವರಿಗೆ ನಾನು ಯಾವುದೇ ನೋಟಿಸು ನೀಡಿರುವುದಿಲ್ಲ. ರಮೇಶ್ ತೀರಿಕೊಂಡ ನಂತರ 15-20 ದಿನಗಳ ನಂತರ ನೋಟಿಸು ನೀಡಿರುತ್ತೇನೆ. ರಮೇಶ್ ರವರು ಯಾವ ದಿನಾಂಕ ತೀರಿಕೊಂಡಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ,

ಸಾಕ್ಷಿಗೆ 6 ತಿಂಗಳ ಒಳಗೆ ನಿಮಗೆ ನೋಟಿಸು ನೀಡಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ರಮೇಶ್ ಮತ್ತು ಸುಮಾ ರವರು ಒಂದೊಂದು ಸಬೂಬು ಹೇಳಿ ದಿನಗಳನ್ನು ತೆಗೆದುಕೊಳ್ಳುತ್ತಿದ್ದರು, ಆದ್ದರಿಂದ ನಾನು ನೋಟಿಸು ನೀಡಿರುವುದಿಲ್ಲ. ನಾನು ಕ್ರಯದ ಕರಾರು ಪತ್ರವಾದ 6 ತಿಂಗಳ ಒಳಗೆ ಪ್ರತಿವಾದಿ 1

ಮತ್ತು ರಮೇಶ್ ರವರನ್ನು ಯಾವೆಲ್ಲಾ ದಿನಾಂಕದಂದು ಹೋಗಿ ಭೇಟಿ ಮಾಡಿರುತ್ತೇನೆ ಎಂದು ಹೇಳಲು ದಿನಾಂಕ ನನಗೆ ನೆನಪಿರುವುದಿಲ್ಲ. 6 ತಿಂಗಳ ಅವಧಿಯ ಒಳಗೆ 5 ಲಕ್ಷ ರೂ ಗಳನ್ನು ತಯಾರು ಇಟ್ಟುಕೊಂಡಿದ್ದೆ. ಸಾಕ್ಷಿಗೆ 6 ತಿಂಗಳ ಅವಧಿಯೊಳಗೆ 5 ಲಕ್ಷ ರೂಗಳ ಡಿ.ಡಿ. ತೆಗೆದು ಪ್ರತಿವಾದಿ 1 ಮತ್ತು ಆಕೆಯ ಗಂಡನಿಗೆ ನೋಟಿಸು ನೀಡಿ ಡಿ.ಡಿ. ಅನ್ನು ನೋಟಿಸ್ ನೋಂದಿಗೆ ಕಳುಹಿಸಿ ಕ್ರಯ ಪತ್ರವನ್ನು ಬರೆದುಕೊಡುವಂತೆ ತಿಳಿಸಿದ್ದಿರಾ ಎಂದರೆ ಸಾಕ್ಷಿಯು 1ನೇ ಪ್ರತಿವಾದಿ ಮತ್ತು ಅಕೆಯ ಗಂಡ ಕ್ರಯ ಪತ್ರವನ್ನು ಬರೆದುಕೊಡುವ ವೇಳೆಗೆ ನಗದು ಹಣ ನೀಡುವಂತೆ ಕೇಳಿಕೊಂಡಿದ್ದರಿಂದ ನೋಟಿಸು ನೀಡಿರುವುದಿಲ್ಲ. ಈ ರೀತಿ ನಾನು 1ನೇ ಪ್ರತಿವಾದಿರವರಿಗೆ ನೀಡಿರುವ ನೋಟಿಸ್ ನಲ್ಲಿ ಹೇಳಿರುತ್ತೇನಾ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ.

1ನೇ ಪ್ರತಿವಾದಿ ಮತ್ತು ಆಕೆಯ ಗಂಡ ರಮೇಶ್ ರವರಿಗೆ ಬೆಂಗಳೂರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಮತ್ತು ಆಕೆಯ ಗಂಡ ರಮೇಶ್ ರವರು ಬೆಂಗಳೂರಿಗೆ ಹೋಗಿ ನೆಲೆಸುವ ಬಗ್ಗೆ ನಾನು ಕಾರಣಗಳನ್ನು ಕೇಳಿರಲಿಲ್ಲ.

ನಿಪಿ-1 ಅನ್ನು ತಯಾರಿಸಿದ ಬೈರಯ್ಯನವರು ನನಗೆ 10-12 ವರ್ಷಗಳಿಂದ ಪರಿಚಯ ಇರುತ್ತದೆ ಮತ್ತು ಅದು ಅಲ್ಲದೆ ಅವರಲ್ಲಿ 2 ಬಾರಿ ತೋಟದಲ್ಲಿ ಎಳನೀರು ಇಳಿಸುವುದಕ್ಕೆ ಪತ್ರ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಬೈರಯ್ಯ ನನ್ನ

ವಿದ್ಯಾರ್ಥಿಯಾಗಿರುವುದಿಲ್ಲ.

ನಿಪಿ-2 ರ ದಾಖಲೆಯನ್ನು ಪ್ರಸ್ತುತ ದಾವೆಯನ್ನು ದಾಖಲಿಸಿದ ನಂತರ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ದಾಖಲಾತಿಯಲ್ಲಿ ನ್ಯಾಯಾಲಯದಲ್ಲಿ ಸಲ್ಲಿಸುವ ಉದ್ದೇಶಕ್ಕಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಿಪಿ-2 ರ ಪ್ರಕಾರ ರಮೇಶ್ ರವರ ಹೆಸರಿಗೆ ದಾವಾ ಆಸ್ತಿಗಳು ಇತ್ತು ಎಂದರೆ ಸರಿ. ಕ್ರಯದ ಕರಾರು ಪತ್ರವಾಗುವ ಸಮಯದಲ್ಲಿ ಆಸ್ತಿಯು ರಮೇಶ್ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ.

ದಾವಾ ಆಸ್ತಿ 1 ನೇ ಪ್ರತಿವಾದಿರವರ ಗಂಡ ರಮೇಶ್ ರವರಿಗೆ ಸೇರಿದ ಆಸ್ತಿಯಾಗಿತ್ತು ಎಂದರೆ ಸರಿ. 1 ನೇ ಪ್ರತಿವಾದಿ ರವರ ಹೆಸರಿನಲ್ಲಿ ಕ್ರಯದ ಕರಾರು ಪತ್ರವಾಗುವ ಸಮಯದಲ್ಲಿ ಇರಲಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಹೆಸರಿನಲ್ಲಿ ದಾವಾ ಆಸ್ತಿ ಇರದೇ ಇದ್ದರೂ ಸಹ ಅವರನ್ನು ಕರಾರು ಪತ್ರದಲ್ಲಿ ತೋರಿಸುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯು ಕ್ರಯದ ಮಾತುಕತೆಯನ್ನು 1 ನೇ ಪ್ರತಿವಾದಿ ಮತ್ತು ಆಕೆಯ ಗಂಡ ಮಾಡಿದ್ದರಿಂದ ಅವರ ಸಹಿಯನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

ನಿಪಿ-1 ರಲ್ಲಿ ಕ್ರಯ ಪತ್ರ ಪಡೆದುಕೊಡಲು 11 ತಿಂಗಳ ವಾಯಿದೆ ಎಂದು ತೋರಿಸಲಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಖಾನೇಷುಮಾರಿ ನಂಬರ್ ಮತ್ತು ಚಕ್ಬಂದಿ ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ಖಾನೇಷುಮಾಡಿ ನಂಬರ್ ದೊಡ್ಡದಿರುಕಾರಣ

ನೆನಪಿರುವುದಿಲ್ಲ. ದಾವಾ ಆಸ್ತಿಯಲ್ಲಿ 2 ಐಟಂ ತೋರಿಸಿರುತ್ತೇನೆ. ಸಾಕ್ಷಿಗೆ ದಾವಾ ಆಸ್ತಿ 2 ಐಟಂಗಳ ಚಕ್‌ಬಂದಿಯನ್ನು ಪ್ರತ್ಯೇಕವಾಗಿ ಹೇಳಲು ಆಗುತ್ತದೆಯೇ ಎಂದರೆ ಸಾಕ್ಷಿಯು ಎರಡೂ ಐಟಂಗಳಿಗೂ ಒಂದೇ ಚಕ್‌ಬಂದಿ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-2 ರ ಕ್ರಯದ ಕರಾರ ಪತ್ರದಲ್ಲಿ 2 ಐಟಂ ಸ್ವತ್ತುಗಳಿಗೆ ಒಂದೇ ಚಕ್‌ಬಂದಿ ಬರೆಸಿರುತ್ತೀರಾ ಎಂದರೆ ಸಾಕ್ಷಿ ಈಗ ಅದು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. 2 ಐಟಂ ಸ್ವತ್ತುಗಳ ಚಕ್‌ಬಂದಿ ಹೇಳಲು ಈಗ ನನಗೆ ನೆನಪಿರುವುದಿಲ್ಲ.

ನಾನು ಕ್ರಯದ ಕರಾರು ಪತ್ರವನ್ನು ಮಾಡಿಸಿಕೊಳ್ಳಲು ಉಪ ನೋಂದಾಣಾಧಿಕಾರಿಗಳ ಕಛೇರಿಗೆ ಹೋದಾಗ 1 ನೇ ಪ್ರತಿವಾದಿಯನ್ನು ಆಕೆಯ ಗಂಡ ರಮೇಶ್ ರವರು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ರಮೇಶ್ ರವರು 1 ನೇ ಪ್ರತಿವಾದಿಯನ್ನು ಮುಂಚಿತವಾಗಿಯೇ ಕರೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ನಿಪಿ-1 ರ ಷಡ್ಯೂಲ್ ಸ್ವತ್ತಿನ ವಿವರ ಎಂದು ಬರೆದಿರುವ ಸ್ಥಳದಲ್ಲಿ ಉತ್ತರ ದಕ್ಷಿಣ 15 ಎಂದು ಅಕ್ಷರದಲ್ಲಿ ಬರೆದು ನಂತರ 13 ಎಂದು ಅಕ್ಷರದಲ್ಲಿ ಬರೆಯಲಾಗಿರುತ್ತದೆ ಎಂದರೆ ಸರಿ. ನಿಪಿ-1 ರಂತೆ ಕರಾರು ಪತ್ರ ಆಗುವ ಪೂರ್ವದಲ್ಲಿ 1 ನೇ ಪ್ರತಿವಾದಿಯ ಗಂಡ ರಮೇಶ್ ರವರು ಸೋಮಶೇಖರೆಡ್ಡಿರವರಿಗೂ ಸಹ ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಆದರೆ ನಿಪಿ-1 ರ 2 ನೇ ಪುಟದ 3 ನೇ ಪ್ಯಾರದಲ್ಲಿ ಬೇರೆಯವರಿಗೆ ಪರಾಧೀನ ಮಾಡಿರುವುದಿಲ್ಲ ಎಂದು ಬರೆಸಲಾಗಿರುತ್ತದೆ ಎಂದರೆ ಸಾಕ್ಷಿಯು ಪ್ರತಿವಾದಿ 1 ಮತ್ತು ಆಕೆಯ ಗಂಡ ಈ ಹಿಂದೆ ಕರಾರು ಪತ್ರ ಮಾಡಿಕೊಂಡಿರುವ ಬಗ್ಗೆ ನನಗೆ ತಿಳಿಸಿರುವುದಿಲ್ಲ ಎಂದು

ನುಡಿಯುತ್ತಾರೆ. ಕ್ರಯದ ಕರಾರು ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ಬೇರೆಯವರಿಗೆ ಸ್ವತ್ತು ಪರಬಾರೆಯಾಗಿರುವ ಬಗ್ಗೆ ಇಸಿ ನೋಡಿಕೊಳ್ಳಬೇಕಾಗಿತ್ತು ಎಂದರೆ ಸಾಕ್ಷಿ ರಮೇಶ್ ರವರೇ ಇಸಿ ಅನ್ನು ತೆಗೆದುಕೊಂಡು ಬಂದಿದ್ದರು ಅದನ್ನು ನೋಡಿಯೇ ಕರಾರು ಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಇಸಿ ಅನ್ನು ಯಾವ ದಿನಾಂಕದಂದು ಎಲ್ಲಿಂದ ಎಲ್ಲಿಯವರೆಗೆ ರಮೇಶ್ ರವರು ತೆಗೆದುಕೊಂಡಿದ್ದರು ಎಂದು ನಾನು ನೋಡಿರುವುದಿಲ್ಲ.

3 ನೇ ಪ್ರತಿವಾದಿಗೆ ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ನಿಮ್ಮ ತಂದೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದರು ಆ ಪ್ರಕಾರ ಕ್ರಯ ಪತ್ರ ಬರೆದುಕೊಡುವಂತೆ ನೋಟಿಸು ನೀಡಿರುತ್ತೀರಾ ಎಂದರೆ ಸಾಕ್ಷಿಯು ಸದರಿ ರವರಿಗೆ ವಯಸ್ಸು ಚಿಕ್ಕದ್ದು ಇತ್ತು ಎಂದು ನುಡಿಯುತ್ತಾರೆ. ಸದರಿ 3 ನೇ ಪ್ರತಿವಾದಿರವರು 2 ನೇ ಪ್ರತಿವಾದಿಗಿಂತ ವಯಸ್ಸಿನಲ್ಲಿ ದೊಡ್ಡವನು ಎಂದರೆ ಸರಿ. ನಿಪಿ-4 ರಂತೆ ನೋಟಿಸನ್ನು 1 ಮತ್ತು 2 ನೇ ಪ್ರತಿವಾದಿಗೆ ಮಾತ್ರ ನೀಡಿರುತ್ತೇನೆ ಎಂದರೆ ಸರಿ. ನಿಪಿ-1 ರಂತೆ ನೋಟಿಸ್‌ನ್ನು 3 ನೇ ಪ್ರತಿವಾದಿಗೂ ಸಹ ನೀಡಬಹುದಾಗಿತ್ತು ಎಂದರೆ ಸಾಕ್ಷಿಯು 3 ನೇ ಪ್ರತಿವಾದಿ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರಿಂದ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

ರಮೇಶ್ ರವರ ತಾಯಿ ಶಾಂತಮ್ಮನವರು ಇತ್ತಿಚೆಗೆ 2 ತಿಂಗಳ ಹಿಂದೆ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಶಾಂತಮ್ಮನವರು ಮೂಲ ಊಟಿಯವರಾಗಿದ್ದು ತುಂಬಾ ಶ್ರೀಮಂತರಾಗಿದ್ದರು ಎಂದರೆ ಸಾಕ್ಷಿಯು ಅವರು ಊಟಿಯವರಾಗಿದ್ದರು ಆದರೆ ಶ್ರೀಮಂತರಿದ್ದರಿಂದು ಎಂದು ನನಗೆ

ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮತ್ತು ಇತರೆ ಆಸ್ತಿಗಳು ಶಾಂತಮ್ಮನವರದ್ದೇ ಆಗಿತ್ತು ಎಂದರೆ ಸರಿ. ಶಾಂತಮ್ಮನವರಿಗೆ ಅಂಗಡಿಗಳಿಂದ ಮತ್ತು ಮನೆಗಳಿಂದ ಸಾಕಷ್ಟು ಆದಾಯ ಬರುತ್ತಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಗಂಡ ದುಷ್ಟ ಚಟಗಳಿಂದ ಅವರ ಮೊದಲನೇ ಹೆಂಡತಿ ತೀರಿಕೊಂಡಿದ್ದರು ಪ್ರತಿವಾದಿಗಳನ್ನು ರಮೇಶ್ ರವರು ಸರಿಯಾಗಿ ನೋಡಿಕೊಳ್ಳದೇ ಇರುವ ಕಾರಣ ಶಾಂತಮ್ಮನವರೇ ಪ್ರತಿವಾದಿಗಳನ್ನು ನೋಡಿಕೊಳ್ಳುತಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ದಿನಾಂಕ 04.08.2012 ರಂದು 1 ನೇ ಪ್ರತಿವಾದಿ ರವರ ಗಂಡ ಸೋಮಶೇಖರ ರೆಡ್ಡಿರವರಿಗೆ ಮಾಡಿಕೊಟ್ಟ ಕರಾರು ಪತ್ರವನ್ನು ತೋರಿಸಿ ಅದರಲ್ಲಿ ಸಹ ಬೈರಲಿಂಗಯ್ಯ ಬಿನ್ ಸಿದ್ದಯ್ಯ ಸಾಕ್ಷಿ ಸಹಿ ಮಾಡಿರುತ್ತಾರೆ ಮತ್ತು ಬೈರಯ್ಯನವರು ತಯಾರು ಮಾಡಿರುತ್ತಾರೆ ಎಂದು ಹೇಳಿದ ಸದರಿ ಪತ್ರದಲ್ಲಿ ಇದ್ದ ಬೈರಲಿಂಗಯ್ಯ ಮತ್ತು ಬೈರಯ್ಯರವರ ಸಹಿಗಳನ್ನು ತೋರಿಸಲಾಗಿ ಸಾಕ್ಷಿ ಸಹಿಗಳನ್ನು ನೋಡಿ ಗುರುತಿಸುತ್ತಾರೆ ಅದ್ದರಿಂದ ಸದರಿ ದಾಖಲೆಯನ್ನು ಗುರುತಿಸುವ ಸಲುವಾಗಿ ನಿಡಿ-4 ಎಂದು ಗುರುತಿಸಲಾಯಿತು. ದಿನಾಂಕ 16.03.2012 ರಂದು ಸಾಕ್ಷಿಗೆ ದಿನಾಂಕ 04.08.2012 ರಂದು 1 ನೇ ಪ್ರತಿವಾದಿ ರವರ ಗಂಡನಿಗೆ ಸೇರಿದ ಆಸ್ತಿಯನ್ನು ನಿಪಿ-1 ನ್ನು ತಯಾರಿಸಿ ಬೈರಯ್ಯ ಮತ್ತು ಸಾಕ್ಷಿದಾರಾಗಿ ಸಹಿ ಮಾಡಿರುವ ಬೈರಲಿಂಗಯ್ಯನರವರೇ ಈ ಪತ್ರಕ್ಕೂ ಸಹಿ ಮಾಡಿರುತ್ತಾರೆ ಎಂದು ಹೇಳಿ ಸದರಿ ದಾಖಲೆಯನ್ನು ತೋರಿಸಲಾಗಿ, ಬೈರಯ್ಯ ಮತ್ತು

ಬೈರಲಿಂಗಯ್ಯನವರ ಸಹಿಗಳನ್ನು ನೋಡಿ ಗುರುತಿಸುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ಗುರುತಿಸುವ ಸಲುವಾಗಿ ನಿಡಿ-5 ಎಂದು ಗುರುತಿಸಲಾಯಿತು. ದಿನಾಂಕ 18.06.2012 ರಂದು ರಮೇಶ್ ರವರಿಗೆ ಸೇರಿಲದ ಆಸ್ತಿಗೆ ಸಂಬಂಧಿಸಿದಂತೆ ಶುದ್ದ ಕ್ರಯದ ಕರಾರು ರದ್ದತಿಯಾದ ಪತ್ರಕ್ಕೆ ಬೈರಲಿಂಗಯ್ಯನವರು ಸಾಕ್ಷಿ ಸಹಿಯಾಗಿ ಮತ್ತು ಬೈರಯ್ಯನವರು ಕರಡು ಪ್ರತಿ ರಚನಕಾರರು ಎಂದು ಸಹಿ ಮಾಡಿರುತ್ತಾರೆ ಎಂದು ಸದರಿ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಗುರುತಿಸುವ ಸಲುವಾಗಿ ದಾಖಲೆಯನ್ನು ನಿಡಿ-6 ಎಂದು ಗುರುತಿಲಾಯಿತು. ಸಾಕ್ಷಿಗೆ ದಿನಾಂಕ 15.11.2013 ರಂದು 1 ನೇ ಪ್ರತಿವಾದಿರವರು ನನ್ನ ವಿರುದ್ಧ ಸೋಮಶೇಖರೆಡ್ಡಿ ಮತ್ತು ಸುಶೀಲಮ್ಮನವರ ವಿರುದ್ಧ ಆಕೆಯ ಗಂಡ ಕಾಣೆಯಾಗಿರುವ ಬಗ್ಗೆ ಪೊಲೀಸರಿಗೆ ದೂರು ನೀಡಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಈ ದಿನವೇ ಮೊದಲ ಬಾರಿಗೆ ಕೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ಎಫ್ ಐ ಆರ್ ಮತ್ತು ದೂರನ್ನು ನೋಡಲಾಗಿ ದಾಖಲೆಯನ್ನು ಓದಿ ನೋಡಿ ಸದರಿ ದಾಖಲೆಗಳಲ್ಲಿ ನನ್ನ ಹೆಸರು ಇರುತ್ತದೆ ಆದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ರಮೇಶ್ ರವರಿಗೆ ಸುರೇಶ್ ಎಂಬ ತಮ್ಮ ಇರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಒಂದು ಫೋಟೋ ಅನ್ನು ತೋರಿಸಿ ಅದರಲ್ಲಿ ದಾವಾ ಆಸ್ತಿಯಲ್ಲಿ ನೆಲ ಮತ್ತು ಮೊದಲ ಅಂತಸ್ತನ ಮನೆ ಕಾಣಿಸುತ್ತದೆ ಎಂದರೆ ಸಾಕ್ಷಿಯು ಸದರಿ ಮನೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನೀವು ಮಾಡಿ

ಕೊಂಡಿರುವ ಕರಾರು ಪತ್ರದ ಆಸ್ತಿಯ ಬಗ್ಗೆ ಒಂದು ಫೋಟೋವನ್ನು ತೆಗೆದು ಹಾಜರಪಡಿಸಲು ಆಗುತ್ತದೆಯೇ ಎಂದರೆ ಸಾಕ್ಷಿ ಆಗುತ್ತದೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಸಾಕ್ಷಿಗೆ ನ್ಯಾಯಾಲಯವು ದಾವಾ ಆಸ್ತಿಯ ಬಗ್ಗೆ ಫೋಟೋ ತಂದು ಹಾಜರುಪಡಿಸಲು ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.